**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೇಳನೆಯ ಅಧಿವೇಶನ**

# ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2025

## (2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–61)

**(ಕರ್ನಾಟಕ ವಿಧಾನ ಸಭೆಯಲ್ಲಿ ಮಂಡಿಸಲಾದಂತೆ ಮತ್ತು ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡಿದಂತೆ ಹಾಗೂ ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ )**

ಕರ್ನಾಟಕ ಭೂಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ.–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.– (1) ಈ ಅಧಿನಿಯಮವನ್ನು, ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ**,** 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **127ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 127ನೇ ಪ್ರಕರಣದ (3)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''(4) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಕೊಡಗು ಜಿಲ್ಲೆಯ ತಹಶೀಲ್ದಾರರು ಅರ್ಜಿ ಅಥವಾ ಅನ್ಯಥಾ ಸ್ವೀಕರಿಸಿದ ಮೇಲೆ, ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಮತ್ತು ಅವರು ಸೂಕ್ತವೆಂದು ಭಾವಿಸಿದ ವಿಚಾರಣೆಯನ್ನು ನಡೆಸಿದ ತರುವಾಯ ಜಮಾಬಂದಿ ರಿಜಿಸ್ಟರಿನ ಕಾಲಂ 3 ರಿಂದ ಆರ್‌ಟಿಸಿಯ ಕಾಲಂ 9 ಮತ್ತು 12ರವರೆಗೆ ವರ್ಗಾಯಿತ ನಮೂದುಗಳಿಗೆ ಸಂಬಂಧಿಸಿದ ಹಾಗೂ ಅದರ ಅಂಥ ವರ್ಗಾವಣೆಯಿಂದಾಗಿ ಮಾಡಲಾದ ಆನುಷಂಗಿಕ ನಮೂದುಗಳನ್ನು, ಈ ಪ್ರಕರಣದ ಉಪ-ಪ್ರಕರಣ (1)ರ (ಎ) ಖಂಡದ ಉಪಬಂಧಗಳಿಗೆ ಅನುಸಾರವಾಗಿ ಅವುಗಳನ್ನು ತರಲು ಅಗತ್ಯವಾದ ಸರಿಪಡಿಸುವಿಕೆಗಳು ಅಥವಾ ರದ್ದತಿಗಳನ್ನು ಮಾಡತಕ್ಕದ್ದು :

ಪರಂತು ಈ ಉಪ-ಪ್ರಕರಣದಡಿ ತಹಶೀಲ್ದಾರನು ಮಾಡಿದ ಯಾವುದೇ ಅಂಥ ಆದೇಶವು ಈ ಅಧಿನಿಯಮದಡಿ ನಿಯಮಿಸಲಾದ ಕಾರ್ಯವಿಧಾನದ ಅನುಸಾರವಾಗಿ ಅಪೀಲಿಗೆ ಅರ್ಹವಾಗತಕ್ಕದ್ದು.''

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ ಮತ್ತು ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ)

ಕೊಡಗು ಜಿಲ್ಲೆಯ ಭೂ ದಾಖಲೆಗಳಲ್ಲಿ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ತರಲಾದ ಕೆಲವು ಬದಲಾವಣೆಗಳು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ಉಪಬಂಧಗಳಿಗೆ ಅಸಂಗತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬದಲಾವಣೆಗಳು ಹೆಚ್ಚಿನದಾಗಿ ಸುತ್ತೋಲೆ ಸಂ. ಆರ್‌ಟಿಸಿ 134 : 2000-2001 ದಿನಾಂಕ : 14.09.2000 ರಿಂದ ಉದ್ಭವಿಸಿವೆ, ಇವು ಹಕ್ಕು ದಾಖಲೆಗಳಲ್ಲಿರುವ (ಆರ್‌ಟಿಸಿ), ನಮೂದುಗಳನ್ನೂ ಒಳಗೊಂಡು ಭೂ ದಾಖಲೆಗಳ ವರ್ಗೀಕರಣ ಮತ್ತು ನಿರ್ವಹಣೆಯಲ್ಲಿನ ವೈಪರಿತ್ಯಗಳಿಗೂ (anomalies) ಕಾರಣವಾಗಿದ್ದು, ಇವುಗಳು ಕಾನೂನಾತ್ಮಕವಾಗಿ ಅಸಮರ್ಥನೀಯವಾಗಿವೆ ಮತ್ತು ಅಧಿನಿಯಮದಡಿ ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಗುಣವಾಗಿರುವುದಿಲ್ಲ.

ಭೂಮಿ ಯೋಜನೆಯಡಿ ಪ್ರಚಲಿತದಲ್ಲಿರುವ ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ಪ್ರಮಾಣಬದ್ಧತೆಯ (standardization) ದೃಷ್ಟಿಯಲ್ಲಿ, ಹಾಗೂ ಭೂ ದಾಖಲೆಗಳ ನಿರ್ವಹಣೆಯಲ್ಲಿ ನಿಖರತೆ, ಏಕರೂಪತೆ ಮತ್ತು ಕಾನೂನುಬದ್ಧತೆಯ ಅಗತ್ಯವನ್ನು ಎತ್ತಿಹಿಡಿದಿರುವ ಹಲವು ನ್ಯಾಯಿಕ ಘೋಷಣೆಗಳ ನಿಟ್ಟಿನಲ್ಲಿ, ಯುಕ್ತ ಕಾನೂನು ಪ್ರಕ್ರಿಯೆಯನ್ನು ಅನುಸರಿಸಿ ಭೂ ದಾಖಲೆಗಳಲ್ಲಿನ ಅಂಥ ಅಸಂಗತತೆಗಳನ್ನು ಸರಿಪಡಿಸಲು ಕೊಡಗು ಜಿಲ್ಲೆಯ ತಹಶೀಲ್ದಾರರಿಗೆ ಅಧಿಕಾರವನ್ನು ನೀಡುವುದು ಅಗತ್ಯವಾಗಿರುತ್ತದೆ.

ಅದರಂತೆ, ನಿಯಮಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ಮತ್ತು ಅಧಿನಿಯಮದ ಅಸ್ತಿತ್ವದಲ್ಲಿರುವ ಉಪಬಂಧಗಳ ಅನುಸಾರವಾಗಿ ಯಾವುದೇ ಅಂಥ ಆದೇಶವು ಮೇಲ್ಮನವಿಗೆ ಅರ್ಹವಾಗುವುದೆಂದು ಖಚಿತಪಡಿಸಿಕೊಂಡ ತರುವಾಯ ಪ್ರಕರಣ 127ರ ಉಪಪ್ರಕರಣ (1)ರ (ಎ) ಖಂಡಕ್ಕೆ ಅನುಗುಣವಾಗಿ ಭೂ ದಾಖಲೆಗಳಲ್ಲಿ ಅಗತ್ಯ ಸರಿಪಡಿಸುವಿಕೆಗಳನ್ನು ಮಾಡುವಂತೆ, ಕೊಡುಗು ಜಿಲ್ಲೆಯಲ್ಲಿನ ತಹಶೀಲ್ದಾರರನ್ನು ಸಶಕ್ತಗೊಳಿಸಲು ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ ಪ್ರಕರಣ 127ರ ಹೊಸ ಉಪ-ಪ್ರಕರಣ (4)ನ್ನು ಸೇರ್ಪಡೆಗೊಳಿಸಲು ಪ್ರಸ್ತಾವಿಸಿದೆ.

ಈ ತಿದ್ದುಪಡಿಯು ಕೊಡಗು ಜಿಲ್ಲೆಯ ಭೂ ದಾಖಲೆಗಳನ್ನು ಕಾನೂನಿಗೆ ಅನುಗುಣವಾಗುವಂತೆ ಮಾಡಲು ಮತ್ತು ರಾಜ್ಯದ ಉಳಿದ ಭಾಗದಲ್ಲಿ ಅದರ ಸಂಗತತೆಯನ್ನು ಖಚಿತಪಡಿಸಿಕೊಳ್ಳುವಂತೆ ಮಾಡುವುದಾಗಿರುತ್ತದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964**

**(1964ರ ಕರ್ನಾಟಕ ಅಧಿನಿಯಮ ಸಂ. 12)ರ**

**ಉದ್ಧೃತ ಭಾಗ**

**XXX XXX XXX**

**127. ಹಕ್ಕು ದಾಖಲೆ.-** (1) ಪ್ರತಿಯೊಂದು ಗ್ರಾಮದ ಬಗೆಗೂ, ನಿಯಮಿಸಿದ ರೀತಿಯಲ್ಲಿ ಹಕ್ಕು ದಾಖಲೆಯನ್ನು ತಯಾರಿಸತಕ್ಕದ್ದು ಮತ್ತು ಅಂಥ ದಾಖಲೆಯಲ್ಲಿ ಈ ಕೆಳಗಿನ ವಿವರಗಳು ಇರತಕ್ಕದ್ದು,-

(ಎ) ಭೂಮಿಯ ಹಿಡುವಳಿದಾರರು, ಅಧಿಭೋಗದಾರರು, ಒಡೆಯರು, ಅಡಮಾನಪಡೆದವರು, ಮಾಲೀಕರು ಅಥವಾ ಗೇಣಿದಾರರು ಆಗಿರುವ ವ್ಯಕ್ತಿಗಳ ಅಥವಾ ಆ ಭೂಮಿಯ ಗೇಣಿಯ ಅಥವಾ ಕಂದಾಯದ ಸಂದಾಯವನ್ನು ಯಾರಿಗೆ ಹಸ್ತಾಂತರಿಸಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು:

(ಬಿ) ಅಂಥ ವ್ಯಕ್ತಿಗಳಿಗೆ ಇರುವ ಆಯಾ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಮತ್ತು ಅದಕ್ಕೆ ಸಂಬಂಧಪಟ್ಟ ಷರತ್ತುಗಳು ಅಥವಾ ಹೊಣೆಗಳು (ಯಾವುವಾದರೂ, ಇದ್ದರೆ):

(ಸಿ) ಅಂಥ ವ್ಯಕ್ತಿಗಳಲ್ಲಿ ಯಾರಾದರೂ ಅಥವಾ ಯಾರಿಗಾದರೂ (ಯಾವುದಾದರೂ) ಸಂದಾಯ ಮಾಡಬೇಕಾಗಿರುವ ಗೇಣಿ ಅಥವಾ ಕಂದಾಯ (ಯಾವುದಾದರೂ ಇದ್ದರೆ); ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವಿವರಗಳು.

(2) ನಿಯಮಿಸಬಹುದಾದಂಥ ಪ್ರದೇಶಗಳಲ್ಲಿ ನಿಯಮಿಸಬಹುದಾದಂಥ ಅಧಿಕಾರಿಗಳು ಹಕ್ಕು ದಾಖಲೆಗಳನ್ನು ಇಟ್ಟಿರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ಅಧಿಕಾರಿಗಳನ್ನು ಗೊತ್ತುಪಡಿಸಬಹುದು.

(3) ಯಾವುದೇ ಗ್ರಾಮದ ಬಗ್ಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಹಕ್ಕು ದಾಖಲೆಯ ತಯಾರಿಕೆಯು ಪೂರ್ಣವಾದಾಗ, ಹಾಗೆ ಅದು ಪೂರ್ಣಗೊಂಡ ಸಂಗತಿಯನ್ನು ರಾಜ್ಯಪತ್ರದಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಕಾಸೂ 60, ಪ್ರತಿಗಳು 250, 16ನೇ ಡಿಸೆಂಬರ್ 2025